

## ಸೋನಾಕ್ಷಿ ಮೇಲೆ ಸಲ್ಲು ಮುನಿಸು

ತಮ್ಮ 'ದಬಾಂಗ್' ನಾಯಕಿ ಸೋನಾಕ್ಷಿ ಮೇಲೆ ಸಲ್ಮಾನ್ ಮುನಿಸಿ–ಕೊಂಡಿದ್ದಾರೆನ್ನುವುದು ಬಿ–ಟೌನಿನ ಗಾಸಿಪ್! 'ಇಲ್ಲವೇ ಇಲ್ಲ. ಹಾಗೇನೂ ಆಗಿಲ್ಲ' ಎನ್ನುವುದು ಸೋನಾಕ್ಷಿ ಸಿನ್ಹಾ ಸ್ಪಷ್ಟನೆ.

ಗುಂಡುಗುಂಡುಗೆ ದೇಹ ಬೆಳೆಸಿಕೊಂಡಿದ್ದ ಸೋನಾಕ್ಷಿಯನ್ನು ಕ್ಯಾಮೆರಾ ಮುಂದೆ ಕರೆತಂದವರು ಸಲ್ಲು ಮಿಯಾ. ಈಗ ಸಲ್ಲೂ ಜೊತೆ ಹೊಸ ಸಿನಿಮಾದಲ್ಲಿ ನಟಿಸಲು ಒಲ್ಲೆ ಎಂದಿದ್ದಾರಂತೆ ಸೋನಾಕ್ಷಿ. ಅರ್ಬಾಜ್ ಖಾನ್ ನಿರ್ದೇಶನದ ಚಿತ್ರದಲ್ಲಿ ತೆರೆ ಹಂಚಿಕೊಳ್ಳಲು ಸಲ್ಲು ಭಾಯ್, ಸೋನಾಕ್ಷಿಗೆ ಆಹ್ವಾನವಿತ್ತಿದ್ದರಂತೆ. ಆದರೆ ಸೋನಾಕ್ಷಿ ಅದನ್ನು ತಿರಸ್ಕರಿಸಿದ್ದಾರಂತೆ. ಅದಕ್ಕೇ ಸಲ್ಲುಗೆ ಕೋಪ ಬಂದಿದೆಯಂತೆ– ಹೀಗೆ ಅಂತೆಕಂತೆಗಳ ಕಂತೆ ಒಗೆಯುತ್ತಿದ್ದಾರೆ ರೂಮರ್ ಪ್ರಿಯರು.

ಇದು ನಿಜವೇ ಎಂದು ಸೋನಾಕ್ಷಿಯನ್ನು ಕೇಳಿದರೆ, 'ಅವರು (ಸಲ್ಮಾನ್) ಮುನಿಸಿಕೊಂಡಿದ್ದರೆ ಅವರನ್ನೇ ಕೇಳಿ, ನನ್ನನ್ನಲ್ಲ. ಆದರೆ ಈ ರೀತಿ ಏನೂ ಆಗಿಲ್ಲ. ನಾವಿಬ್ಬರೂ ಚೆನ್ನಾಗಿಯೇ ಇದ್ದೇವೆ. ಪ್ರಕಟವಾಗಿರುವ ವರದಿ ಸುಳ್ಳೇ ಸುಳ್ಳು' ಎಂದು ಒಂದೇ ಉಸಿರಿನಲ್ಲಿ ಉತ್ತರಿಸಿದರಂತೆ.

ಅಂದ ಹಾಗೆ, ಸಲ್ಮಾನ್‌ರ 'ಕಿಕ್'ನಲ್ಲಿ ಸೋನಾಕ್ಷಿ ಜೋಡಿಯಾಗಬೇಕಿತ್ತು. ಅದರ ಬಗ್ಗೆ ಬಹಳ ಹಿಂದೆ ಮಾತುಕತೆಯೂ ನಡೆದಿತ್ತು. ಬಳಿಕ ಹಲವು ಸಿನಿಮಾಗಳಲ್ಲಿ ಬಿಜಿಯಾದ ಸೋನಾಕ್ಷಿಗೆ 'ಕಿಕ್'ನಲ್ಲಿ ಬಣ್ಣಹಚ್ಚಲು ಸಮಯವೇ ಸಿಗಲಿಲ್ಲ. ಬಿಡುವಿಲ್ಲದ ಚಿತ್ರೀಕರಣದಲ್ಲಿ ತೊಡಗಿರುವ ಸೋನಾಕ್ಷಿ, 'ಇಷ್ಟವಾದ ಸಿನಿಮಾಗಳಲ್ಲೆಲ್ಲಾ ನಟಿಸಬೇಕೆಂದರೆ ನನ್ನನ್ನು ಎರಡು ದೇಹಗಳಾಗಿ ತುಂಡರಿಸಬೇಕಾಗುತ್ತದೆ' ಎಂದು ಮಾರ್ಮಿಕವಾಗಿ ನುಡಿದಿದ್ದಾರೆ.

ಅಂದುಕೊಂಡಂತೆ ನಡೆದರೆ 'ದಬಾಂಗ್ 3'ನಲ್ಲಿ ಸಲ್ಲು– ಸೋನಾಕ್ಷಿ ಒಂದಾಗಬಹುದು. ಸೋನಾಕ್ಷಿ ಗಮನ ಈಗೇನಿದ್ದರೂ 'ರಾ... ರಾಜ್–ಕುಮಾರ್' ಚಿತ್ರದ ಮೇಲೆ. ಸೋನಾಕ್ಷಿ ಮತ್ತು ಶಾಹಿದ್ ಕಪೂರ್ ನಟಿಸಿರುವ ಬಹುನಿರೀಕ್ಷೆಯ ಈ ಚಿತ್ರ ಈ ವಾರ ತೆರೆ ಕಾಣುತ್ತಿದೆ.

## ಡಿಪ್ಸ್ ಗೆಲುವಿನ ಕ್ರೆಡಿಟ್ ಬೆಬೋಗೆ!

ದೀಪಿಕಾ ಪಡುಕೋಣೆ ಬಾಲಿವುಡ್‌ನಲ್ಲೀಗ ಚಿನ್ನದ ಹುಡುಗಿ. ಡಿಪ್ಸ್ ನಟಿಸಿದ ಚಿತ್ರಗಳೆಲ್ಲವೂ ಗಲ್ಲಾಪೆಟ್ಟಿಗೆಯಲ್ಲಿ ಯಶಸ್ವಿ. ಬಿಡುಗಡೆಯಾಗಿ ವಾರ ಕಳೆಯುವುದರೊಳಗೆ ಶತಕೋಟಿ ಗಳಿಕೆ ಕಾಣುತ್ತಿವೆ. ಅದಕ್ಕೆ ಹೊಸ ಸೇರ್ಪಡೆ 'ಗೋಲಿಯೋಂಕಿ ರಾಸ್‌ಲೀಲಾ ರಾಮ್‌ಲೀಲಾ'.

ಆಕೆಯ ಇತ್ತೀಚಿನ ಗೆಲುವಿಗೆ ಕಾರಣ ಯಾರು ಗೊತ್ತೇ? ಬಾಲಿವುಡ್‌ನ ನಂಬರ್ ಒನ್ ನಟಿ ಎಂದೇ ಕರೆಸಿಕೊಳ್ಳುತ್ತಿರುವ ಕರೀನಾ ಕಪೂರ್. 'ರಾಮ್‌ಲೀಲಾ' ಚಿತ್ರದ ಲೀಲಾ ಪಾತ್ರಕ್ಕೆ ಮೊದಲು ಆಯ್ಕೆಯಾಗಿದ್ದು ಕರೀನಾ. ಅದೇ ವೇಳೆ 'ಗೋರಿ ತೇರೆ ಪ್ಯಾರ್ ಮೇ' ಚಿತ್ರ ಆಹ್ವಾನವೂ ಬಂದಿತು. ರಾಮ್‌ಲೀಲಾ ಬಿಟ್ಟು ಕರೀನಾ 'ಗೋರಿ...' ಆಯ್ದುಕೊಂಡರು. ಹೀಗೆ ಖಾಲಿಯಾದ ನಾಯಕಿ ಸ್ಥಾನವನ್ನು ಅಲಂಕರಿಸಿದ್ದು ದೀಪಿಕಾ. ಚಿತ್ರದ ಗೆಲುವಿನ ಭರಾಟೆ ಕಂಡು ಕರೀನಾ ದಂಗಾಗಿದ್ದಾರಂತೆ. ದೀಪಿಕಾ ಬಗ್ಗೆ ಒಳಗೊಳಗೆ ಹೊಟ್ಟೆಕಿಚ್ಚು ಪಟ್ಟುಕೊಳ್ಳುತ್ತಿರುವ ಕರೀನಾ, ಪರೋಕ್ಷವಾಗಿ ಆಕೆಯ ಜನಪ್ರಿಯತೆಗೆ ನಾನೇ ಕಾರಣ ಎನ್ನುತ್ತಿದ್ದಾರೆ!

'ಅನೇಕ ವೇಳೆ ಸಿನಿಮಾಗಳಿಗೆ ಸಹಿ ಹಾಕಿ ಆಮೇಲೆ ತಪ್ಪು ಮಾಡಿದೆ ಎಂದು ಬೇಸರಪಟ್ಟುಕೊಂಡಿದ್ದೆ. ಈಗಲೂ ತಪ್ಪುಮಾಡಿದೆ ಎನಿಸುತ್ತಿದೆ. ನಾನೇ 'ರಾಮ್‌ಲೀಲಾ'ದಲ್ಲಿ ನಟಿಸಬೇಕಿತ್ತು. ಆದರೆ 'ಗೋರಿ...' ಒಪ್ಪಿಕೊಂಡೆ. ಸಂಜಯ್‌ಲೀಲಾ ಬನ್ಸಾಲಿ ಚಿತ್ರದ ಅವಕಾಶ ತಪ್ಪಿಸಿಕೊಂಡೆ. ಇಂಥ ಒಳ್ಳೆ ಸಿನಿಮಾಗಳನ್ನು ಬೇರೊಬ್ಬ ನಟಿಯರಿಗೆ ಬಿಟ್ಟುಕೊಡುವ ನಟಿಯೆಂದರೆ ನಾನೊಬ್ಬಳೇ ಎಂಬ ಹೆಮ್ಮೆ ನನ್ನದು'– ಇದು ಕರೀನಾ ಮಾತು. ಕರೀನಾ ತಮಾಷೆ ಮಾಡಿದ್ದರೂ ಮಾಡಿರಬಹುದು. ಆದರೆ ಎದೆಯೊಳಗಿನ ಕಿಚ್ಚು ಸಣ್ಣನೆ ಉರಿದು ಹೋಗಿದ್ದು ಸುಳ್ಳಲ್ಲ ಎಂದು ನಗುತ್ತಿದೆ ಬಾಲಿವುಡ್.

■ ಅಮಿ

